‘ಸುಧಾ’ದೊಂದಿಗೆ ಅವರು ಮಾತನಾಡಿದ್ದಾರೆ.

**ಯುವ ವಸ್ತ್ರವಿನ್ಯಾಸಕರಿಗೆ ಲಂಡನ್ ಫ್ಯಾಷನ್ ಸಪ್ತಾಹದಂತಹ ಕಾರ್ಯಕ್ರಮದಲ್ಲಿನ ಅವಕಾಶ, ವೃತ್ತಿ ಬೆಳವಣಿಗೆಗೆ ಎಷ್ಟು ಸಹಕಾರಿ ?**

ದೊಡ್ಡ ಈವೆಂಟ್‌ಗಳಲ್ಲಿ ಪಾಲ್ಗೊಳ್ಳುವುದು ನಾವು ಇದೇ ಕ್ಷೇತ್ರದಲ್ಲಿ ಮುಂದುವರಿಯುವುದಕ್ಕೆ ದೊಡ್ಡ ಸ್ಫೂರ್ತಿ ಮತ್ತು ಅವಕಾಶ ನೀಡುತ್ತದೆ. ಆತ್ಮವಿಶ್ವಾಸ ಹೆಚ್ಚಿಸಿತು ಹಾಗೂ ತಾಂತ್ರಿಕವಾಗಿ ನಾನು ಹೆಚ್ಚು ತಿಳಿದುಕೊಳ್ಳಲು ಸಾಧ್ಯವಾಯಿತು. ಯೋಚನಾ ವಿಧಾನದಲ್ಲಿ ಬದಲಾವಣೆ ಮಾಡಿಕೊಳ್ಳಲು ಸಹಾಯವಾಯಿತು ಮತ್ತು ಈಗಿನ ಟ್ರೆಂಡ್ ಬಗ್ಗೆ ಹೆಚ್ಚು ತಿಳಿದುಕೊಳ್ಳುವುದರಿಂದ ಸಹಜವಾಗಿಯೂ ವೃತ್ತಿಕೌಶಲ ಬೆಳವಣಿಗೆಗೆ ಇಂತಹ ಕಾರ್ಯಕ್ರಮಗಳು ದೊಡ್ಡ ಕೊಡುಗೆ ನೀಡುತ್ತವೆ.

**ಲಂಡನ್‌ನಲ್ಲಿ ನಿಮ್ಮ ಅನುಭವ ಹೇಗಿತ್ತು ?**

‘ಹಿರೋಯಿಕ್ ಬೊಹೆಮಿಯನ್’ ಶೀರ್ಷಿಕೆಯಡಿ ನಾನು ವಿನ್ಯಾಸಗೊಳಿಸಿದ ಉಡುಪುಗಳನ್ನು ರೂಪದರ್ಶಿಗಳು ಪ್ರದರ್ಶಿಸಿದರು. ಪಾಶ್ಚಾತ್ಯ ತೊಡುಗೆಗೆ ಭಾರತೀಯ ಸ್ಪರ್ಶ ನೀಡುವುದು ಈಗಿನ ಟ್ರೆಂಡ್. ನಾನು ಅದನ್ನೇ ಅಳವಡಿಸಿಕೊಂಡಿದ್ದೇನೆ. ಬೇಲೂರಿನ ಚನ್ನಕೇಶ್ವರ ದೇಗುಲದ ಸುತ್ತ ಸೂಕ್ಷ್ಮ ಮತ್ತು ಸುಂದರವಾದ ಕಲಾಕೃತಿಗಳು ಇವೆ. ಅವುಗಳನ್ನೇ ವಿನ್ಯಾಸದಲ್ಲಿಯೂ ಬಳಸಿದೆ. ಸಣ್ಣ ಆನೆಯ ಆಕೃತಿಯನ್ನು ಅಲಂಕಾರದಂತೆ ಉಪಯೋಗಿಸಿದೆ. ಇನ್ನು, ರಾಜ್ಯದಲ್ಲಿ ಲಂಬಾಣಿಗರು ಧರಿಸುವ ಉಡುಪುಗಳು ಆಕರ್ಷಕವಾಗಿರುತ್ತವೆ. ಅದನ್ನೇ ಸ್ಫೂರ್ತಿಯಾಗಿಟ್ಟುಕೊಂಡು ಕವಡೆಯನ್ನು ಒಂದು ಉಡುಪಿನಲ್ಲಿ, ಕನ್ನಡಿಯನ್ನು ಮತ್ತೊಂದು ಉಡುಪಿನಲ್ಲಿ ಬಳಸಿದೆ. ಇದಕ್ಕೆ ತಜ್ಞರಿಂದ ಪ್ರಶಂಸೆ ವ್ಯಕ್ತವಾಯಿತು. ‘ಹಿರೋಯಿಕ್ ಬೊಹೆಮಿನ್’ ಅಂದರೆ, ‘ಡೋಂಟ್‌ಕೇರ್ ಸ್ವಭಾವ’ ಅಥವಾ ಬಿಂದಾಸ್ ಮನಸ್ಥಿತಿ ಎಂಬರ್ಥ ಬರುತ್ತದೆ. ಆ ಮನೋಭಾವಕ್ಕೆ ಸೂಕ್ತವಾಗುವಂತೆ ವಿನ್ಯಾಸಗೊಳಿಸಿದ್ದೇನೆ.

2017ರ ಸೆಪ್ಟೆಂಬರ್‌ನಲ್ಲಿ ಲಂಡನ್‌ನಲ್ಲಿ ‘ಇಂಡಿಯಾ ಡೇ’ ಅಂಗವಾಗಿ ವಸ್ತ್ರವಿನ್ಯಾಸ ಪ್ರದರ್ಶನ ಆಯೋಜಿಸಲಾಗಿತ್ತು. ಅಲ್ಲಿನ ಭಾರತೀಯ ರಾಯಭಾರಿ ದಿನೇಶ್ ಕೆ. ಪಟ್ನಾಯಕ್ ಸನ್ಮಾನಿಸಿದ್ದು ಸಂತಸ ತಂದಿತು.

**ಸ್ಪರ್ಧೆಗೆ ಆಯ್ಕೆಯಾಗಿದ್ದು ಹೇಗೆ ?**

ಐಎನ್‌ಐಎಫ್‌ಡಿಯಿಂದ ಪ್ರತಿವರ್ಷ ಅಂತರರಾಷ್ಟ್ರೀಯ ಷೋಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸಲಾಗುತ್ತದೆ. ಆದರೆ, ಎಲ್ಲರನ್ನೂ ಆಯ್ಕೆ ಮಾಡುವುದಿಲ್ಲ. ಸ್ಥಳೀಯವಾಗಿಯೇ ಸ್ಕ್ರೀನಿಂಗ್ ನಡೆಯುತ್ತದೆ. ನಂತರ, ಚಂಡೀಗಡದಲ್ಲಿ ಎಲ್ಲ ಸ್ಪರ್ಧಿಗಳನ್ನು ಆಹ್ವಾನಿಸಿದರು. ಅಲ್ಲಿ ತಜ್ಞರು ಸಲಹೆ ನೀಡಿದರು. ಮಾರ್ಗದರ್ಶನ ಮಾಡಿದರು. ನಂತರ, ಲಂಡನ್‌ಗೆ 24 ಸ್ಪರ್ಧಿಗಳನ್ನು ಆಯ್ಕೆ ಮಾಡಿದರು. ಇವರೆಲ್ಲರೂ ವಿಜೇತರೇ. ಇಲ್ಲಿ ಗೆದ್ದವರಿಗೆ ಯಾವುದೇ ನಗದು ಬಹುಮಾನ ಇಲ್ಲ. ಆದರೆ, ವೃತ್ತಿಪರತೆ ಪ್ರಾಪ್ತವಾಗುತ್ತದೆ. ತಜ್ಞರ, ದೊಡ್ಡ ಕಂಪೆನಿಗಳ ಸಂಪರ್ಕ ಸಿಗುವುದರಿಂದ ನಮ್ಮ ಬೆಳವಣಿಗೆಗೆ ಸಾಧ್ಯವಾಗುತ್ತದೆ.

**ಈ ಕ್ಷೇತ್ರದಲ್ಲಿ ಸಂವಹನ ಕಲೆ ಎಷ್ಟು ಮುಖ್ಯ ?**

ಇಲ್ಲಿ ನಮ್ಮನ್ನು ನಾವು ‘ಪ್ರೆಸೆಂಟ್’ ಮಾಡಿಕೊಳ್ಳುವುದು ತುಂಬಾ ಮುಖ್ಯ. ಅದಕ್ಕೆ ಸೂಕ್ತವಾದ ಸಂವಹನ ಕಲೆ ಇರಲೇಬೇಕಾಗುತ್ತದೆ. ಲಂಡನ್‌ನಲ್ಲಿರುವ ಖ್ಯಾತ ಭಾರತೀಯ ವಸ್ತ್ರವಿನ್ಯಾಸಕ ಮನೀಶ್ ಮಲ್ಹೋತ್ರಾ, ಭಾರತದ ಮಸಾಬಾ ಗುಪ್ತಾ ಅವರಂಥವರನ್ನು ಮಾತನಾಡಿಸುವ ಅವಕಾಶ ಸಿಕ್ಕಿತು. ಇಂತಹ ಸಂದರ್ಭದಲ್ಲಿ ಸಂವಹನ ಕಲೆ ಮಹತ್ವದ ಪಾತ್ರ ವಹಿಸುತ್ತದೆ. ಸ್ಪರ್ಧೆಗೆ ಹೋಗುವುದಕ್ಕೆ ಮುನ್ನ ನಾನು ಯೋಚಿಸುತ್ತಿದ್ದ ರೀತಿಗೂ, ಈಗ ಯೋಚಿಸುವ ರೀತಿಗೂ ಅಜಗಜಾಂತರವಿದೆ. ಅದಕ್ಕೆ ನಾನು ಈ ಸ್ಪರ್ಧೆಗೆ ಧನ್ಯವಾದ ಹೇಳಬಯಸುತ್ತೇನೆ.

**ಈಗಿನ ಟ್ರೆಂಡ್ ಹೇಗಿದೆ ?**

1990ರ ವಸ್ತ್ರವಿನ್ಯಾಸ ಶೈಲಿಯೇ ಮತ್ತೆ ಬರುತ್ತಿದೆ. 2018ರ ಫೆಬ್ರುವರಿಯಿಂದ ಈ ಟ್ರೆಂಡ್ ಶುರುವಾಗಬಹುದು. ವಸ್ತ್ರವಿನ್ಯಾಸದ ವೇಳೆ ಆಯಾ ಋತುಮಾನವನ್ನೂ ನಾವು ಗಮನಿಸಬೇಕಾಗುತ್ತದೆ. ‘ಸ್ಪ್ರಿಂಗ್ ಸಮ್ಮರ್’ ಹೆಸರಿನಲ್ಲಿ ಬೇಸಿಗೆಗೆ ಸೂಕ್ತವಾದ ವಸ್ತ್ರಗಳನ್ನು ವಿನ್ಯಾಸಗೊಳಿಸಿದ್ದೇನೆ. ಬಣ್ಣದ ಸಂಯೋಜನೆ, ಋತುಮಾನಕ್ಕೆ ತಕ್ಕ ಬಟ್ಟೆಯ ಆಯ್ಕೆ, ತಾಂತ್ರಿಕ ಕೌಶಲ ಎಲ್ಲವೂ ಟ್ರೆಂಡ್ ಮೇಲೆ ಪ್ರಭಾವ ಬೀರುತ್ತವೆ.

**ಜನರನ್ನು ಯಾವ ರೀತಿ ತಲುಪುತ್ತೀರಿ ?**

ನಾವು ವಿನ್ಯಾಸಗೊಳಿಸಿದ ಉಡುಪುಗಳ ಪ್ರದರ್ಶನವನ್ನು ಆಯೋಜಿಸಲಾಗುತ್ತದೆ. ಅಲ್ಲದೆ, ಸಾಮಾಜಿಕ ಮಾಧ್ಯಮಗಳಾದ ಫೇಸ್‌ಬುಕ್ ಹಾಗೂ ವಾಟ್ಸ್‌ಆ್ಯಪ್ ಮೂಲಕವೂ ನಾವು ಜನರನ್ನು ತಲುಪಬಹುದು. ನಿತ್ಯವೂ ಹೊಸದನ್ನು ಕೊಟ್ಟರೆ, ಈ ಕ್ಷೇತ್ರದಲ್ಲಿ ಬೇಡಿಕೆ ಇದ್ದೇ ಇದೆ.

**ಫ್ಯಾಷನ್ ಡಿಸೈನ್ ಕೋರ್ಸ್ ಅನಿವಾರ್ಯವೇ ?**



ನಮ್ಮಲ್ಲಿರುವ ಪ್ರತಿಭೆಯನ್ನು ಒರೆಗೆ ಹಚ್ಚುವ ಕೆಲಸವನ್ನು ಮೆಂಟರ್‌ಗಳು ಮಾಡುತ್ತಾರೆ. ಅಂತಹ ಮಾರ್ಗದರ್ಶಕರು ಇಂತಹ ಕೋರ್ಸ್‌ಗಳನ್ನು ಕಲಿಯುವಾಗ ನಮಗೆ ಸಿಗುತ್ತಾರೆ. ಈ ಕಾರಣದಿಂದ ಫ್ಯಾಷನ್ ಡಿಸೈನ್ ಕೋರ್ಸ್ ಪಡೆಯುವುದು ಮುಖ್ಯವಾಗುತ್ತದೆ. ಹುಬ್ಬಳ್ಳಿಯಲ್ಲಿ ಐಬಿಎಂಆರ್ ಕಾಲೇಜಿನಲ್ಲಿ ಬಿ.ಕಾಂ ಪಡೆದ ನಂತರ, ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡೆ. ನನಗೆ ಮೊದಲಿನಿಂದಲೂ ಫ್ಯಾಷನ್ ಡಿಸೈನ್‌ನಲ್ಲಿ ಆಸಕ್ತಿ ಇತ್ತು. ಹಾಗಾಗಿ, ಐಎನ್‌ಐಎಫ್‌ಡಿ ಸೇರಿದೆ. ಐಎನ್‌ಐಎಫ್‌ಡಿ ಹುಬ್ಬಳ್ಳಿ ಕೇಂದ್ರದ ನಿರ್ದೇಶಕಿ ಜ್ಯೋತಿ ಬಿದಸಾರಿಯಾ ಹಾಗೂ ಕೇಂದ್ರದ ಮುಖ್ಯಸ್ಥೆ ಭಾವಿಕಾ ಬಗ್ರೇಚಾ ಉತ್ತಮ ಮಾರ್ಗದರ್ಶನ ನೀಡಿದ್ದಾರೆ. ಈಗ ಫ್ಯಾಷನ್ ಡಿಸೈನಿಂಗ್‌ನಲ್ಲಿ ಬಿಎಸ್‌ಸಿ ಅಂತಿಮ ವರ್ಷ ವ್ಯಾಸಂಗ ಮಾಡುತ್ತಿದ್ದೇನೆ. ಕಲಿಕಾ ಹಂತದಲ್ಲಿಯೇ ಉತ್ತಮ ಅವಕಾಶ ಸಿಕ್ಕಿರುವುದಕ್ಕೆ ಸಂತಸವಾಗುತ್ತಿದೆ.

**ಕುಟುಂಬದ ಬೆಂಬಲ ಹೇಗಿದೆ ?**

ನಾವು ಉಡುಪಿಯವರು. ತಂದೆ ದಿನೇಶ್ ನಾಯಕ್, ನೆಸ್ಲೆ ಕಂಪೆನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಹುಬ್ಬಳ್ಳಿಗೆ ವರ್ಗಾವಣೆಯಾದ ನಂತರ, ನಾನು ಇಲ್ಲಿಯೇ ಬೆಳೆದಿದ್ದೇನೆ. ‘ನಿನಗೆ ಆಸಕ್ತಿ ಇರುವ ಕ್ಷೇತ್ರವನ್ನೇ ಆಯ್ಕೆ ಮಾಡಿಕೊ’ ಎಂದು ತಂದೆ ಹೇಳಿದರು. ತಾಯಿ ನೀತಾ ನಾಯಕ್, ಅಕ್ಕ ಶ್ವೇತಾ ನಾಯಕ್ ಕೂಡ ಬೆಂಬಲ ನೀಡಿದರು. ಅಕ್ಕ ವೈದ್ಯಳಾದರೂ, ‘ಅವಳ ಹಾದಿಯಲ್ಲಿಯೇ ನೀನೂ ಹೋಗು’ ಎಂದು ಯಾವತ್ತೂ ತಂದೆ–ತಾಯಿ ಒತ್ತಡ ಹಾಕಲಿಲ್ಲ. ಈ ಕ್ಷೇತ್ರದಲ್ಲಿಯೇ ಮುಂದುವರಿದು, ನನ್ನದೇ ಆದ ಒಂದು ಮಳಿಗೆ ಸ್ಥಾಪಿಸಿ, ಉತ್ತರ ಕರ್ನಾಟಕದಲ್ಲಿ ಪ್ರಮುಖ ಕಂಪೆನಿಗಳೊಂದಿಗೆ ವ್ಯವಹಾರ ಒಪ್ಪಂದ ಮಾಡಿಕೊಳ್ಳಬೇಕೆಂದಿದ್ದೇನೆ. ■